# ಕರ್ನಾಟಕ ಸರ್ಕಾರ

## ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/328/ಸಪ್ರಾನೇ/2017-18/ನೇ.ವಿ-1

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:30.06.2018.

## ಅಧಿಕೃತ ಜ್ಞಾಪನ

ವಿಷಯ: ಹೊಸದಾಗಿ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ನೇಮಕಾತಿ ಹೊಂದಿರುವ ಅಭ್ಯರ್ಥಿಗಳಿಗೆ ಕರ್ತವ್ಯಕ್ಕೆ ಹಾಜರಾಗಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ:
1) ಈ ಕಛೇರಿಯ ಆದೇಶ ಸಂಖ್ಯೆ:ಕಾಶಿಇ/154/ಸಪ್ರಾನೇ/2017-18/ನೇವಿ-1, ದಿನಾಂಕ:23.08.2017.
2) ಈ ಕಛೇರಿಯ ಆದೇಶ ಸಂಖ್ಯೆ:ಕಾಶಿಇ/155/ಸಪ್ರಾನೇ/2017-18/ನೇವಿ-1, ದಿನಾಂಕ:30.08.2017.
3) ಈ ಕಛೇರಿಯ ಆದೇಶ ಸಂಖ್ಯೆ:ಕಾಶಿಇ/190/ಸಪ್ರಾನೇ/2017-18/ನೇವಿ-1, ದಿನಾಂಕ:07.09.2017.
4) ಈ ಕಛೇರಿಯ ಆದೇಶ ಸಂಖ್ಯೆ:ಕಾಶಿಇ/153/ಸಪ್ರಾನೇ/2017-18/ನೇವಿ-1, ದಿನಾಂಕ:16.09.2017.

*******

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ವಿವಿಧ ವಿಷಯಗಳಲ್ಲಿ ಆಯ್ಕೆ ಹೊಂದಿರುವ ಅಭ್ಯರ್ಥಿಗಳಿಗೆ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಸರ್ಕಾರವು ನೇಮಕಾತಿ ಆದೇಶ ಹೊರಡಿಸಿದ್ದು, ಅವರುಗಳಿಗೆ ಸ್ಥಳ ಆಯ್ಕೆಗಾಗಿ ವಿವಿಧ ದಿನಾಂಕಗಳಂದು ಕೌನ್ಸಿಲಿಂಗ್ ನಡೆಸಲಾಗಿರುತ್ತದೆ. ಸದರಿ ಕೌನ್ಸಿಲಿಂಗ್‌ನಲ್ಲಿ ಹಾಜರಾದ ಅಭ್ಯರ್ಥಿಗಳು ಕಾಲೇಜು/ಸ್ಥಳ ಆಯ್ಕೆ ಮಾಡಿಕೊಂಡಿದ್ದು, ಅದರನ್ವಯ ಉಲ್ಲೇಖಿತ ಈ ಕಛೇರಿ ಆದೇಶಗಳಲ್ಲಿ ಸ್ಥಳ ನಿಯುಕ್ತಿ ಆದೇಶಗಳನ್ನು ನೀಡಲಾಗಿರುತ್ತದೆ. ಸ್ಥಳ ನಿಯುಕ್ತಿ ಹೊಂದಿರುವ ಅಭ್ಯರ್ಥಿಗಳ ಪೈಕಿ ಕೆಲವು ಅಭ್ಯರ್ಥಿಗಳು ಕಾರಣಾಂತರಗಳಿಂದ ಸಂಬಂಧಪಟ್ಟ ಕಾಲೇಜುಗಳಲ್ಲಿ ಕರ್ತವ್ಯಕ್ಕೆ ಹಾಜರಾಗಲು ಕಾಲಾವಕಾಶವನ್ನು ನೀಡುವಂತೆ ಕೋರಿ ಇಲಾಖೆಗೆ ಮನವಿಗಳನ್ನು ಸಲ್ಲಿಸಿದ್ದು, ಸದರಿ ಮನವಿಗಳ ಕುರಿತು ಕೈಗೊಳ್ಳಬೇಕಾದ ಕ್ರಮದ ಬಗ್ಗೆ ಸರ್ಕಾರದ ಮಾರ್ಗದರ್ಶನ ಕೋರಲಾಗಿತ್ತು. ಅದರಂತೆ ಸದರಿ ಮನವಿಗಳನ್ನು ಪರಿಶೀಲಿಸಿ, ಸರ್ಕಾರವು ಈ ಕೆಳಕಂಡ ವಿವಿಧ ವಿಷಯಗಳಲ್ಲಿನ 07 ಸಹಾಯಕ ಪ್ರಾಧ್ಯಾಪಕರುಗಳಿಗೆ ಕರ್ತವ್ಯಕ್ಕೆ ಹಾಜರಾಗಲು ಅನುಮತಿ ನೀಡಿರುತ್ತದೆ. ಆದ್ದರಿಂದ ಈ ಕೆಳಕಂಡ 07 ಸಹಾಯಕ ಪ್ರಾಧ್ಯಾಪಕರುಗಳು ಕೌನ್ಸಿಲಿಂಗ್‌ನಲ್ಲಿ ಆಯ್ಕೆ ಮಾಡಿಕೊಂಡಿರುವ ಅವರ ಹೆಸರಿನ ಮುಂದೆ ಸೂಚಿಸಿರುವ ಕಾಲೇಜುಗಳಲ್ಲಿ ಕರ್ತವ್ಯಕ್ಕೆ ಹಾಜರಾಗಲು ಅನುಮತಿ ನೀಡಲಾಗಿದೆ.

| ಕ್ರ. ಸಂ. | ಹೆಸರು ಶ್ರೀ:ಶ್ರೀಮತಿ | ವಿಷಯ ಹಾಗೂ ಪದನಾಮ | ಕೌನ್ಸಿಲಿಂಗ್‌ನಲ್ಲಿ ಆಯ್ಕೆ ಮಾಡಿಕೊಂಡ ಕಾಲೇಜು ಮತ್ತು ಸ್ಥಳ |
|---|---|---|---|
| 1. | ಬನದೇವಿ ಶಂಕರ ಕೊಡ್ಲಣ್ಣವರ | ಅರ್ಥಶಾಸ್ತ್ರ ಸಹಾಯಕ ಪ್ರಾಧ್ಯಾಪಕರು | ಸಪ್ರದಕಾ, ಝಳಕಿ, ವಿಜಯಪುರ ಜಿಲ್ಲೆ |
| 2. | ಸಿದ್ರಾಮಪ್ಪ ಬಣಗಾರ | ಕನ್ನಡ ಸಹಾಯಕ ಪ್ರಾಧ್ಯಾಪಕರು | ಸಪ್ರದಕಾ, ಹುಲಸೂರು, ಬೀದರ್ ಜಿಲ್ಲೆ |

.......2

| | | | |
|---|---|---|---|
| 3. | ಶಂಕರ ರಾಥೋಡ್ | ಹಿಂದಿ<br>ಸಹಾಯಕ ಪ್ರಾಧ್ಯಾಪಕರು | ಸಪ್ರದಕಾ, ರಾಯಭಾಗ,<br>ಬೆಳಗಾವಿ ಜಿಲ್ಲೆ |
| 4. | ಶ್ರೀಧರ ಎನ್ | ವಾಣಿಜ್ಯಶಾಸ್ತ್ರ<br>ಸಹಾಯಕ ಪ್ರಾಧ್ಯಾಪಕರು | ಸಪ್ರದಕಾ, ಶ್ರೀರಾಮನಗರ,<br>ಕೊಪ್ಪಳ ಜಿಲ್ಲೆ |
| 5. | ಶೃತಿ ಬಿ.ಆರ್. | ಅರ್ಥಶಾಸ್ತ್ರ<br>ಸಹಾಯಕ ಪ್ರಾಧ್ಯಾಪಕರು | ಸಪ್ರದಕಾ. ಉಪ್ಪಿನಂಗಡಿ,<br>ದ.ಕ.ಜಿಲ್ಲೆ |
| 6. | ಅವಿರತ ಮಾವಿನಕುಳಿ | ನಿರ್ವಾಹಣಾಶಾಸ್ತ್ರ<br>ಸಹಾಯಕ ಪ್ರಾಧ್ಯಾಪಕರು | ಸಪ್ರದಕಾ, ಕೆ.ಆರ್.ನಗರ,<br>ಮೈಸೂರು ಜಿಲ್ಲೆ |
| 7. | ನಯನ ಎಂ | ಸಮಾಜಶಾಸ್ತ್ರ<br>ಸಹಾಯಕ ಪ್ರಾಧ್ಯಾಪಕರು | ಸಪ್ರದಕಾ, ಪುಂಜಾಲಕಟ್ಟೆ,<br>ದ.ಕ ಜಿಲ್ಲೆ |

ಮೇಲ್ಕಂಡ ಸಹಾಯಕ ಪ್ರಾಧ್ಯಾಪಕರುಗಳು ಸಂಬಂಧಪಟ್ಟ ಕಾಲೇಜುಗಳಲ್ಲಿ ಕೂಡಲೇ ಕರ್ತವ್ಯಕ್ಕೆ ಹಾಜರಾಗತಕ್ಕದ್ದು. ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರುಗಳು ಸದರಿ ಅಧ್ಯಾಪಕರುಗಳನ್ನು ಕರ್ತವ್ಯಕ್ಕೆ ಹಾಜರುಪಡಿಸಿಕೊಂಡು, ಕರ್ತವ್ಯಕ್ಕೆ ಹಾಜರಾದ ಬಗ್ಗೆ ವರದಿಯನ್ನು ಈ ಕಛೇರಿಗೆ ಕಳುಹಿಸುವಂತೆ ಸೂಚಿಸಲಾಗಿದೆ.

ಮುಂದುವರೆದು, ಪುನಃ ಯಾವುದೇ ಕಾರಣಕ್ಕೂ ಕರ್ತವ್ಯಕ್ಕೆ ಹಾಜರಾಗಲು ಅವಧಿಯನ್ನು ವಿಸ್ತರಿಸುವುದಿಲ್ಲ ಹಾಗೂ ಒಂದು ವೇಳೆ ಸಂಬಂಧಪಟ್ಟ ಕಾಲೇಜುಗಳಲ್ಲಿ ಕರ್ತವ್ಯಕ್ಕೆ ಹಾಜರಾಗದೆ ಇದ್ದಲ್ಲಿ ಸದರಿ ಹುದ್ದೆಗೆ ಹಾಜರಾಗಲು ಆಸಕ್ತಿ ಇರುವುದಿಲ್ಲವೆಂದು ಭಾವಿಸಿ, ನೇಮಕಾತಿ / ಸ್ಥಳ ನಿಯುಕ್ತಿ ಆದೇಶವನ್ನು ರದ್ದುಪಡಿಸಲು ಕ್ರಮವಹಿಸಲಾಗುವುದು ಎಂಬುದಾಗಿ ಸದರಿ ಅಭ್ಯರ್ಥಿಗಳಗೆ ಈ ಮೂಲಕ ಕಟ್ಟುನಿಟ್ಟಾಗಿ ಸೂಚನೆ ನೀಡಲಾಗಿದೆ.

"ಟಿಪ್ಪಣಿ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ."

Sulpan

**ಕಾಲೇಜು ಶಿಕ್ಷಣ ಮುಖ್ಯ ಆಡಳಿತಾಧಿಕಾರಿಗಳು**

**ಇವರಿಗೆ,**

1. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಝಳಕಿ, ವಿಜಯಪುರ ಜಿಲ್ಲೆ.
2. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಲಸೂರು, ಬೀದರ್ ಜಿಲ್ಲೆ,
3. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಯಭಾಗ, ಬೆಳಗಾವಿ ಜಿಲ್ಲೆ,
4. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶ್ರೀರಾಮನಗರ, ಕೊಪ್ಪಳ ಜಿಲ್ಲೆ,
5. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಉಪ್ಪಿನಂಗಡಿ, ದಕ್ಷಿಣ ಕನ್ನಡ ಜಿಲ್ಲೆ,
6. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಆರ್.ನಗರ, ಮೈಸೂರು ಜಿಲ್ಲೆ,
7. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪುಂಜಾಲಕಟ್ಟೆ, ದಕ್ಷಿಣ ಕನ್ನಡ ಜಿಲ್ಲೆ.
8. ಮೇಲ್ಕಂಡ ಸಹಾಯಕ ಪ್ರಾಧ್ಯಾಪಕರುಗಳಗೆ – ಮಾಹಿತಿ & ಅಗತ್ಯ ಕ್ರಮಕ್ಕಾಗಿ.

**ಪ್ರತಿಯನ್ನು:**

1) ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು – ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.
2) ಮ್ಯಾನೆಜರ್/ಅಧೀಕ್ಷಕರು, ವರ್ಗಾವಣೆ & ನಿಯೋಜನೆ, ಸೇವಾ, ಬಡ್ತಿ & ಸ್ಥಾನೀಕರಣ ವಿಭಾಗ, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು.
3) ಕಛೇರಿ ಪ್ರತಿ.